# <u>ಕರ್ನಾಟಕ ವಿಧಾನ ಪರಿಷತ್ತು</u>

| | | |
|---|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | : | **2501** |
| **ಸದಸ್ಯರ ಹೆಸರು** | : | **ಶ್ರೀ ಯು.ಬಿ. ವೆಂಕಟೇಶ್ (ನಾಮನಿರ್ದೇಶನ ಹೊಂದಿದವರು)** |
| **ಉತ್ತರಿಸಬೇಕಾದ ದಿನಾಂಕ** | : | **23-03-2022** |
| **ಉತ್ತರಿಸುವ ಸಚಿವರು** | : | **ಕಂದಾಯ ಸಚಿವರು** |

<table>
<tr><th>ಪ್ರಶ್ನೆ</th><th>ಉತ್ತರ</th></tr>
<tr><td>(ಅ) ರಾಜ್ಯದಲ್ಲಿ ಕಳೆದ 5 ವರ್ಷಗಳ ಅವಧಿಯಲ್ಲಿ ಅತಿವೃಷ್ಟಿ ಮತ್ತು ಅನಾವೃಷ್ಟಿಯಿಂದ ಉಂಟಾಗಿರುವ ನಷ್ಟದ ಪ್ರಮಾಣ ಎಷ್ಟು; (ತಾಲ್ಲೂಕುವಾರು ನಷ್ಟದ ಪ್ರಮಾಣ ನೀಡುವುದು)</td>
<td>2017-18ರಲ್ಲಿ ಬರ-ಪ್ರವಾಹ ಪರಿಸ್ಥಿತಿ ಎದುರಾಗಿರುವುದಿಲ್ಲ.<br>2018-19ರಲ್ಲಿ ಆಗಸ್ಟ್ ಪ್ರವಾಹದಿಂದ ರೂ.4262.09ಕೋಟಿ, 2018 ಮುಂಗಾರು ಬರದಿಂದ ರೂ.16,662.48ಕೋಟಿ ಹಾಗೂ 2018 ಹಿಂಗಾರು ಬರದಿಂದ ರೂ.11,384.47ಕೋಟಿ ನಷ್ಟವಾಗಿದೆ.<br>2019-20ನೇ ಸಾಲಿನ ಪ್ರವಾಹದಿಂದ ರೂ.35,160.81ಕೋಟಿ, 2020-21ನೇ ಸಾಲಿನ ಪ್ರವಾಹದಿಂದ ರೂ.24,941.72ಕೋಟಿ ಹಾಗೂ 2021-22ನೇ ಸಾಲಿನ ಪ್ರವಾಹದಿಂದ ರೂ.18,292.57ಕೋಟಿ ಅಂದಾಜು ನಷ್ಟವಾಗಿದೆ.</td></tr>
<tr><td>(ಆ) ಈ ನಿಟ್ಟಿನಲ್ಲಿ ಕೇಂದ್ರ ಸರ್ಕಾರದಿಂದ ರಾಜ್ಯಕ್ಕೆ ಬಿಡುಗಡೆಯಾಗಿರುವ ಹಾಗೂ ರಾಜ್ಯ ಸರ್ಕಾರದಿಂದ ಬಿಡುಗಡೆಯಾಗಿರುವ ಪರಿಹಾರದ ಮೊತ್ತವೆಷ್ಟು; (ವರ್ಷವಾರು ಮಾಹಿತಿಯನ್ನು ನೀಡುವುದು)</td>
<td>SDRF ರಡಿ ಬಿಡುಗಡೆಗೊಳಿಸಿದ ಅನುದಾನದ ವಿವರ ಈ ಕೆಳಕಂಡಂತಿದೆ:<br>(ರೂ.ಕೋಟಿಗಳಲ್ಲಿ)
<table>
<tr><th>ವರ್ಷ</th><th>SDRF ಕೇಂದ್ರದ ಪಾಲು</th><th>SDRF ರಾಜ್ಯದ ಪಾಲು</th><th>ರಾಜ್ಯದಿಂದ ಬಿಡುಗಡೆಯಾದ ಹೆಚ್ಚುವರಿ ಮೊತ್ತ</th><th>ರಾಜ್ಯದಿಂದ ಬಿಡುಗಡೆಯಾದ ಒಟ್ಟು ಮೊತ್ತ</th></tr>
<tr><td>2017-18</td><td>228.75</td><td>76.25</td><td>37.19</td><td>342.19</td></tr>
<tr><td>2018-19</td><td>240.00</td><td>80.00</td><td>200.00</td><td>520.00</td></tr>
<tr><td>2019-20</td><td>244.05</td><td>81.50</td><td>947.00</td><td>1,792.55</td></tr>
<tr><td>2020-21</td><td>790.50</td><td>263.50</td><td>492.29</td><td>1,546.29</td></tr>
<tr><td>2021-22</td><td>790.50</td><td>263.50</td><td>2,468.22</td><td>3,522.22</td></tr>
</table>
ಕೇಂದ್ರ ಸರ್ಕಾರದಿಂದ NDRF ರಡಿ (100% ಕೇಂದ್ರದ ಪಾಲು) ಬಿಡುಗಡೆಗೊಳಿಸಿದ ಅನುದಾನದ ವಿವರ ಈ ಕೆಳಕಂಡಂತಿದೆ:<br><br>
2018 ಆಗಸ್ಟ್ ಪ್ರವಾಹ ಪರಿಹಾರಕ್ಕಾಗಿ ರೂ.525.22ಕೋಟಿ.<br>
2018 ಮುಂಗಾರು ಬರ ಪರಿಹಾರಕ್ಕಾಗಿ ರೂ.949.49ಕೋಟಿ.<br>
2018 ಹಿಂಗಾರು ಬರ ಪರಿಹಾರಕ್ಕಾಗಿ ರೂ.1029.39ಕೋಟಿ.<br>
2019 ಆಗಸ್ಟ್ ಪ್ರವಾಹ ಪರಿಹಾರಕ್ಕಾಗಿ ರೂ.1652.85ಕೋಟಿ.<br>
2020 ಆಗಸ್ಟ್ ಪ್ರವಾಹ ಪರಿಹಾರಕ್ಕಾಗಿ ರೂ.577.84ಕೋಟಿ.<br>
2020 ಸೆಪ್ಟೆಂಬರ್-ಅಕ್ಟೋಬರ್ ಪ್ರವಾಹ ಪರಿಹಾರಕ್ಕಾಗಿ ರೂ.740.46ಕೋಟಿ.<br>
2021 ಜುಲೈ ಪ್ರವಾಹ ಪರಿಹಾರಕ್ಕಾಗಿ ರೂ.501.88ಕೋಟಿ.<br>
2021 ಅಕ್ಟೋಬರ್-ನವೆಂಬರ್ ಪ್ರವಾಹ ಪರಿಹಾರಕ್ಕಾಗಿ ರೂ.492.39ಕೋಟಿ.<br><br>
ಮೇಲ್ಕಂಡಂತೆ, ಕೇಂದ್ರ ಸರ್ಕಾರದಿಂದ NDRF ರಡಿ ಬಿಡುಗಡೆ ಮಾಡಿರುವ ಅನುದಾನವನ್ನು ಬೆಳೆ ಹಾನಿ ಇನ್‌ಪುಟ್ ಸಬ್ಸಿಡಿಗಾಗಿ ಕೇಂದ್ರ ಸರ್ಕಾರದ ಮಾರ್ಗಸೂಚಿಯನ್ವಯ ವೆಚ್ಚ ಭರಿಸಲಾಗಿದೆ.</td></tr>
</table>

| | |
|---|---|
| **(ಇ)** ಸದರಿ ಮೊತ್ತವನ್ನು ಯಾವ ಯಾವ ಬಾಬ್ತುಗಳಿಗೆ ಮತ್ತು ಯಾವ ಯಾವ ವ್ಯಕ್ತಿಗಳಿಗೆ ಎಷ್ಟೆಷ್ಟು ಹಣವನ್ನು ಪರಿಹಾರವಾಗಿ ಪಾವತಿಸಲಾಗಿದೆ; (ಬಾಬ್ತುವಾರು, ವ್ಯಕ್ತಿವಾರು ವಿವರವನ್ನು ನೀಡುವುದು) | ಬೆಳೆ ಹಾನಿ ಇನ್‌ಪುಟ್ ಸಬ್ಸಿಡಿಗಾಗಿ ಭರಿಸಿದ ವೆಚ್ಚ:<br>2017-18 ಬರ-ಪ್ರವಾಹ ಎದುರಾಗಿಲ್ಲ.<br>2018 ಮುಂಗಾರು ಬರ-10.91ಲಕ್ಷ ರೈತರಿಗೆ ರೂ.892.26ಕೋಟಿ<br>2018 ಹಿಂಗಾರು ಬರ-12.57ಲಕ್ಷ ರೈತರಿಗೆ ರೂ.838.27ಕೋಟಿ<br>2018 ಪ್ರವಾಹ-1.69ಲಕ್ಷ ರೈತರಿಗೆ ರೂ.168.91ಕೋಟಿ<br>2019 ಪ್ರವಾಹ-6.71ಲಕ್ಷ ರೈತರಿಗೆ ರೂ.1232.20ಕೋಟಿ<br>2020 ಪ್ರವಾಹ-12.00ಲಕ್ಷ ರೈತರಿಗೆ ರೂ.941.71ಕೋಟಿ<br>2021 ಪ್ರವಾಹ-18.49ಲಕ್ಷ ರೈತರಿಗೆ ರೂ.2435.57ಕೋಟಿ<br><br>ಪ್ರವಾಹದಿಂದ ಹಾನಿಗೊಳಗಾದ ಗೃಹೋಪಯೋಗಿ ವಸ್ತು ಪರಿಹಾರಕ್ಕಾಗಿ ಪ್ರತಿ ಕುಟುಂಬಕ್ಕೆ ತಲಾ ರೂ.10,000/-ದಂತೆ 2019ರಲ್ಲಿ 2.07ಲಕ್ಷ, 2020ರಲ್ಲಿ 36,306 ಹಾಗೂ 2021ರಲ್ಲಿ 85,862ಕುಟುಂಬಗಳಿಗೆ ಪಾವತಿಸಲಾಗಿದೆ.<br><br>2019ರ ಪ್ರವಾಹದಿಂದ 1,34,936 ಮನೆ ಹಾನಿಯಾಗಿದ್ದು, ಮನೆಹಾನಿ ಪರಿಹಾರಕ್ಕಾಗಿ ರೂ.2,211.15ಕೋಟಿಗಳನ್ನು, 2020ರ ಪ್ರವಾಹದಿಂದ 39,157 ಮನೆ ಹಾನಿಯಾಗಿದ್ದು, ಮನೆಹಾನಿ ಪರಿಹಾರಕ್ಕಾಗಿ ರೂ.309.39ಕೋಟಿಗಳನ್ನು ಹಾಗೂ 2021ರ ಪ್ರವಾಹದಿಂದ 53,315 ಮನೆ ಹಾನಿಯಾಗಿದ್ದು, ಮನೆಹಾನಿ ಪರಿಹಾರಕ್ಕಾಗಿ ರೂ.400.52ಕೋಟಿಗಳನ್ನು ನೇರ ಸಂತ್ರಸ್ತರಿಗೆ ಪಾವತಿಸಲಾಗಿದೆ.<br><br>ಮಾನವ ಜೀವ ಹಾನಿ ಹಾಗೂ ಜಾನುವಾರು ಹಾನಿ ಪ್ರಕರಣಗಳಿಗೆ ಜಿಲ್ಲಾಧಿಕಾರಿಗಳ ಹಂತದಲ್ಲಿ ಪರಿಹಾರ ಪಾವತಿಸಲಾಗಿದೆ.<br>ವಿವರಗಳು<br>https://landrecords.karnataka.gov.in/PariharaPayment/<br>ಜಾಲತಾಣದಲ್ಲಿ ಲಭ್ಯವಿದೆ. |
| **(ಈ)** ಪರಿಹಾರವನ್ನು ವಿತರಿಸಲು ಬಾಕಿಯಿರುವ ಪ್ರಕರಣಗಳೆಷ್ಟು ಹಾಗೂ ವಿಳಂಬಕ್ಕೆ ಕಾರಣಗಳೇನು? | ನಿಯಮಾನುಸಾರ ಅರ್ಹರಿರುವ ಎಲ್ಲಾ ಫಲಾನುಭವಿಗಳಿಗೆ ಪರಿಹಾರ ಪಾವತಿಸಲಾಗಿದೆ. |

ಕಂಇ 132 ಟಿಎನ್‌ಆರ್ 2022

(ಆರ್. ಅಶೋಕ)
ಕಂದಾಯ ಸಚಿವರು